# ಕರ್ನಾಟಕ ವಿಧಾನ ಪರಿಷತ್ತು

**ಸದಸ್ಯರ ಹೆಸರು** : ಡಾ॥ ಚಂದ್ರಶೇಖರ್ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ)

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** : 487 (479)

**ಉತ್ತರಿಸಬೇಕಾದ ಸಚಿವರು** : **ಮಾನ್ಯ ಕೃಷಿ ಸಚಿವರು**

**ಉತ್ತರಿಸಬೇಕಾದ ದಿನಾಂಕ** : **19-07-2024.**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ 2015 ರಲ್ಲಿ ಸಹಾಯಕ ಹುದ್ದೆಗಾಗಿ 36 (ಹೈ.ಕ) ಅಭ್ಯರ್ಥಿಗಳಿಗೆ ಆಯ್ಕೆ ಮಾಡಿ ಮಾರ್ಚ್-2023 ದಾಖಲಾತಿ ಪರಿಶೀಲನೆಗಾಗಿ ಕರೆದು ಇಲ್ಲಿಯವರೆಗೆ ನೇಮಕಾತಿ ಪಟ್ಟಿಯನ್ನು ಪ್ರಕಟಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| (ಆ) | ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ನೇಮಕಾತಿ ಪಟ್ಟಿ ಪ್ರಕಟಿಸಿರುವುದಿಲ್ಲ: | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಇಲ್ಲಿ ಖಾಲಿ ಇರುವ ಹೈದ್ರಾಬಾದ್-ಕರ್ನಾಟಕದ 36 ಹುದ್ದೆಗಳಿಗೆ ನೇಮಕಾತಿ ಆದೇಶ ಹೊರಡಿಸುವ ಮುನ್ನ ಆರ್ಥಿಕ ಇಲಾಖೆಯ ದಿನಾಂಕ:24-11-2021ರ ಸುತ್ತೋಲೆಯಂತೆ ಸದರಿ ಹುದ್ದೆಗಳಿಗೆ ಆಯವ್ಯಯದಲ್ಲಿ ಸೂಕ್ತ ಅನುದಾನವನ್ನು ಕಲ್ಪಿಸಿಕೊಳ್ಳಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿ, ಆರ್ಥಿಕ ಇಲಾಖೆಯು 36 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸುವುದರಿಂದ ಉಂಟಾಗುವ ವೆಚ್ಚವನ್ನು ರಾಯಚೂರು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸುವಂತೆ ತಿಳಿಸಿದ್ದು, ಈ ವಿಷಯವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿಗೆ ದಿನಾಂಕ: 19-02-2024ರಂದು ತಿಳಿಸಲಾಗಿರುತ್ತದೆ.<br><br>ಆದರೆ, ತದನಂತರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರುರವರು ಶಿಕ್ಷಣ, ಸಂಶೋಧನೆ, ವಿಸ್ತರಣೆ, ಇತರೆ ಅಭಿವೃದ್ಧಿ ಚಟುವಟಿಕೆಗಳಿಗೆ, ಶೇ.14ರಷ್ಟು ಎನ್.ಪಿ.ಎಸ್ ವಂತಿಕೆ, ಮಧ್ಯಂತರ ಪರಿಹಾರದ ಮೊತ್ತ, ಬೋಧಕ/ ಬೋಧಕೇತರ ಹುದ್ದೆಗಳು ಖಾಲಿಯಿರುವುದರಿಂದ, ಬಾಹ್ಯಂತರ ಸೇವೆಯಿಂದ ಪಡೆಯುತ್ತಿದ್ದು, ಇದರ ಸಂಬಳದ ವಂತಿಗೆಯು ಸಹ ಆಂತರಿಕ ಸಂಪನ್ಮೂಲದಿಂದ |

| | | |
|---|---|---|
| | | ಭರಿಸಲಾಗುತ್ತಿರುವುದರಿಂದ, 36 ಅಭ್ಯರ್ಥಿಗಳ ನೇಮಕಾತಿಗೂ ಸಹ ಆಂತರಿಕ ಸಂಪನ್ಮೂಲದಿಂದ ವೆಚ್ಚ ಭರಿಸಲು ಕಷ್ಟವಾಗುತ್ತದೆ |
| (ಇ) | ಯಾವಾಗ ನೇಮಕಾತಿ ಪಟ್ಟಿ ಪ್ರಕಟಿಸಲಾಗುವುದು? | ಎಂದು ತಿಳಿಸಿ, ವಿಶ್ವವಿದ್ಯಾಲಯದ ಹಂತದಲ್ಲಿ ನೇಮಕಾತಿ ಆದೇಶವನ್ನು ಹೊರಡಿಸದೆ, ಪ್ರಸ್ತಾಪಿತ 36 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ತಗಲುವ ವೇತನ ಅನುದಾನವನ್ನು ಸರ್ಕಾರದಿಂದ ಭರಿಸಲು ವಿನಂತಿಸಿಕೊಂಡಿರುತ್ತಾರೆ.<br><br>ಅದರೆ, ಸರ್ಕಾರವು ದಿನಾಂಕ:14-06-2024ರಂದು ಈ ಹಿಂದೆ ನೀಡಿದ್ದ ಅಭಿಪ್ರಾಯವನ್ನು ಪುನರುಚ್ಚರಿಸಿ, ಕೃವಿವಿ, ರಾಯಚೂರಿಗೆ ತಿಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಅಂತಿಮ ನೇಮಕಾತಿ ಪಟ್ಟಿಯನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಪ್ರಕಟಿಸಬೇಕಾಗಿದೆ. |

ಸಂಖ್ಯೆ: AGRI/22/AUR/2024

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು